


### ಉಪಯುಕ್ತ ಮಾಹಿತಿ

ಡಾ.ಸಿ.ಆರ್.ಚಂದ್ರಶೇಖರ್ ಅವರ 'ನಮ್ಮ ಮಗು ಅವರ ಇಂಗ್ಲಿಷ್' ಲೇಖನ ಉಪಯುಕ್ತ ಮಾಹಿತಿಯಿಂದ ಕೂಡಿದೆ.

-ಪಿ.ಗೋವಿಂದರಾಜ್, ಶಿವಮೊಗ್ಗ/
ಕೆ.ಎಸ್.ಚಂದ್ರ, ಕೌಡ್ಲೆ

### ವಿಶಾಲಾರ್ಥದ ಬರಹ

ಮಂಜುನಾಥ ಬೇದ್ರೆಯವರ 'ಮಕ್ಕಳಿಷ್ಟದಂತೆ ಕಲಿಯಲು ಬಿಡಿ' ವಿಶಾಲಾರ್ಥದ ಲೇಖನ.

ಎಚ್.ಆನಂದಕುಮಾರ್, ಚಿತ್ರದುರ್ಗ

### ವೈ-ಚಾರಿಕ ಲೇಖನ

'ಹುಣಸೆ ಮರದಲ್ಲಿ ದೆವ್ವ ಇದೆ' ಅಲ್ಲಿ ಹೋಗಬೇಡಿ ಎಂದು ಹಿರಿಯರು ನಾವು ಸಣ್ಣವರಿದ್ದಾಗ ತಡೆಯುತ್ತಿದ್ದರು. ಹಾಗೆಯೇ ಅರಳೀಮರ ಸುತ್ತಿದರೆ ಮಕ್ಕಳಾಗುತ್ತವೆಂದು ಅರಳೀಮರ ಸುತ್ತುವ ಮಹಿಳೆಯರನ್ನು ನೋಡಿದ್ದೇವೆ. ಈ ಕುರಿತ ವೈ-ಚಾರಿ(ಕ) ಬರಹ ಮೂಢನಂಬಿಕೆಗಳ ಬುಡವನ್ನೇ ಅಲುಗಾಡಿಸಿತು.

-ಎಚ್.ಎಂ. ಕಾಳಮ್ಮ, ಬಸರಕೋಡು

### 60 ಪ್ಲಸ್ ಅಮೂಲ್ಯ ಸಲಹೆ

ವೈ. ನಾರಾಯಣ ಶರ್ಮ '60 ಪ್ಲಸ್; ಮುಂದೇನು?' ಬರಹದಲ್ಲಿ ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ.

-ಮೊಳಕಾಲ್ಮುರು ಸುರೇಶ್, ಬಳ್ಳಾರಿ

### ಮನತಟ್ಟಿದ ಕಥೆ

'ಗೆಳತಿ' ನಮ್ಮ ಮನ ತಟ್ಟಿದ ಕಥೆ. 'ಕೆರೆಗೆ ಹಾರ' ಜನಪದ ಕಥೆಯ ಹಿನ್ನೆಲೆಯಲ್ಲಿ ಸ್ವಾರಸ್ಯವೆನಿಸಿತು. ದಯಮಾಡಿ ಲೇಖಕಿ ಕೆ. ನೀಲಾ ಅವರ ಅಂಚೆ ವಿಳಾಸವನ್ನು ಪ್ರಕಟಿಸಬೇಕಾಗಿ ಕೋರಿಕೆ.



-ಶಿವರಾಮು ರೆಡ್ಡಿ, ಸಂದೀಪ್ ಗಾಯಕವಾಡ, ನಿಖಿಲ್ ಶರ್ಮ, ದೀಪಕ್ ರೈ, ಅಮಿತ್ ಧಾರವಾಡಕರ್, ಹುಲಿಕೋಟಿ (ಗದಗ ಜಿಲ್ಲೆ)/ ರಾಜಶೇಖರ ಗೌಡ, ಕೊಟ್ಟೂರು

(ವಿಳಾಸ: ಕೆ.ನೀಲಾ, ಕೇ/ಆ ಡಾ.ಶಾಂತಾ ಮಠ, ಬ್ಲಾಕ್ 32, ಸ್ನೇಹ ನಗರ, ಉದನೂರು ಕ್ರಾಸ್, ಹೊಸ ಜೇವರ್ಗಿ ರಸ್ತೆ, ಗುಲ್ಬರ್ಗ, ಮೊಬೈಲ್-9448778796)

### ಮುತ್ತಿನಂತಹ ಮಾತು

'ಮಾತೇ ಮುತ್ತು'ವಿನಲ್ಲಿ ಸದಾನಂದ ಕನವಳ್ಳಿಯವರ ಮಾತು ಬಹಳ ಇಷ್ಟವಾಯಿತು. ಬರೀ ಸಾಹಿತ್ಯದ ಜ್ಞಾನಪೀಠದ ಸಂಭ್ರಮದಲ್ಲೇ ಇರುವ ನಾವು ಕರ್ನಾಟಕಕ್ಕೆ ರಾಷ್ಟ್ರ ಅಂತರ್‍ರಾಷ್ಟ್ರೀಯ ಮಟ್ಟದಲ್ಲಿ ಗೌರವ ತಂದುಕೊಟ್ಟಿರುವ ಹಿಂದೂಸ್ತಾನಿ ಗಾಯಕರ ಸಾಧ್ಯತೆ ಬಗೆಗೂ ಹೆಮ್ಮೆ ಪಡಬೇಕು. ನಿಜಕ್ಕೂ ಇದು ಮುತ್ತಿನಂತಹ ಮಾತೇ ಸರಿ.

-ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

### ಲೇಖಾ ಅಲ್ಲ, ಇಲಿಯಾನ

ಚಿತ್ರಸುಧಾ ವಿಭಾಗದಲ್ಲಿ ಪ್ರಕಟವಾದ ಚಿತ್ರ ನಟಿಯ 'ಬ್ಲೋ ಅಪ್' ಹುಡುಗ ಹುಡುಗಿ ಚಿತ್ರದ 'ಇಲಿಯಾನ'ಳದ್ದು. ಆದರೆ ಹೆಸರು 'ಲೇಖಾ ವಾಷಿಂಗ್ಟನ್' ಎಂದು ತಪ್ಪಾಗಿ ಮುದ್ರಿತವಾಗಿದೆ.

-ಅಭಿಮಾನಿ ಓದುಗ , ದೊಡ್ಡಬಳ್ಳಾಪುರ

ಹೌದು, ಕಣ್ತಪ್ಪಾಗಿದೆ.

-ಸಂ.

### 2 ಅಲ್ಲ 10, 3 ಅಲ್ಲ 4

ರಜನೀಕಾಂತ್ ಅವರ ಕುರಿತ ನ.18ರ ಸುಧಾ ಸಂಚಿಕೆಯಲ್ಲಿ ರಜನಿಯವರ ಎರಡು ಕನ್ನಡ ಚಿತ್ರಗಳ ಬಗ್ಗೆ ಮಾತ್ರ ಪ್ರಸ್ತಾಪಿಸಲಾಗಿದೆ. ಆದರೆ ಅವರು 1976ರ 'ಕಥಾ ಸಂಗಮ'ದಿಂದ 1979ರ 'ಪ್ರಿಯಾ'ವರೆಗೆ ಒಟ್ಟು ಹತ್ತು ಕನ್ನಡ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ.

ನ.25ರ ಸುಧಾದಲ್ಲಿ ಗುರುಕಿರಣ್ ಅವರ ಹಸನ್ಮುಖಿ ಚಿತ್ರದ ಜತೆ ಪ್ರಕಟವಾಗಿರುವ ಖುಷಿ ಖುಷಿಯಲಿ... ಬರಹದಲ್ಲಿ ರಚಹ ಅವರು, ಗುರುಕಿರಣ್ ಅವರು 2010ರಲ್ಲಿ ಕೆಲಸ ಮಾಡಿರುವುದು ಮೂರು ಚಿತ್ರಗಳಲ್ಲಿ ಮಾತ್ರ ಎಂದು ಬರೆದಿದ್ದಾರೆ. ಆದರೆ 2010ರ ಜೂನ್ ತಿಂಗಳಲ್ಲಿ ಬಿಡುಗಡೆಯಾದ 'ಮಿಸ್ಟರ್ ತೀರ್ಥ' ಅವರ ನಾಲ್ಕನೇ ಚಿತ್ರ.

-ಎಸ್.ಜಯಸಿಂಹ, ಬೆಂಗಳೂರು

### ಶಿಖರಪ್ರಾಯ 'ಸುಧಾ'

45 ವರ್ಷಗಳ ಹಿಂದೆ ಪುಟ್ಟ ಕಂದಮ್ಮನಾಗಿ ನಮ್ಮ ಮನೆಗೆ ಕಾಲಿರಿಸಿದ 'ಸುಧಾ' ಇಂದು ಪ್ರೌಢೆಯಾಗಿ ಬೆಳೆದಿದ್ದು, ಉಪಯುಕ್ತ ಮಾಹಿತಿಗಳ ಕಣಜವಾಗಿದ್ದಾಳೆ. ಇಲ್ಲಿನ ಲೇಖನಗಳು ಹಾಗೂ ಸ್ಥಿರ ಶೀರ್ಷಿಕೆಗಳಾದ ವಿಚಾರ ಲಹರಿ, ಮಾತೇ ಮುತ್ತು, ನೀವು ಕೇಳಿದಿರಿ, ಜಾಣರ ಪೆಟ್ಟಿಗೆ, ಸುಖೀಭವ ಕಾಲಂಗಳಿಂದ ಇಂದು ಪತ್ರಿಕಾರಂಗದಲ್ಲಿ ಮೇರು ಶಿಖರವಾಗಿದ್ದಾಳೆ.

-ಜಿ.ಕೆ.ಶ್ರೀಮತಿ, ಬೆಂಗಳೂರು

